ದಿನ ಪತ್ರಿಕೆ
Reg No. M 1299
Daily & Weekly

For All Kinds of
Printing & Binding
The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 311] ಗುರುವಾರ 10—6—1943 [3 ಪೈ

Opera — Aryamala
ಅಪೆರಾ——
5 ನೇ ಅಮೋಘ ವಾರ
ಆರ್ಯಮಾಲ
ಪಿ. ಯು. ಚಿನ್ನಪ್ಪ, ಸಂತಾನಲಕ್ಷ್ಮಿ
ಶಕುಂತಲ, ಕೃಷ್ಣ, ಮಧುರಾ
ಮುಂತಾದವರು ಪಾತ್ರವಹಿಸಿರುವರು

ಬೆಂಗಳೂರು ಮಿಲಿಟರಿ ಪ್ರದರ್ಶನ ಪ್ರಾರಂಭೋತ್ಸವದಲ್ಲಿ ಶ್ರೀಮನ್ಮಹಾರಾಜರವರು ಮಾಡಿದ ಭಾಷಣದ ಸಾರಾಂಶ

—೦—

ಅಖಿಲ ಭಾರತ ಯುದ್ಧ ಕಾರ್ಯ ಪ್ರದರ್ಶನವನ್ನು ಬೆಂಗಳೂರಿನಲ್ಲಿ ಸಡೆಯು ವಂತೆ ಮಾಡಿರುವದು ನನಗೆ ಸಂತೋಷ ವಾಗಿದೆ. ಹಿಂದೆ ದೆಹಲಿ ಮತ್ತು ಮುಂ ಬೈಗಳಲ್ಲಿ ಯಶಸ್ವಿಯಾಗಿ ನಡೆಯಿತು. ನಾವು ಮೊದಲು ಈ ಪ್ರದರ್ಶನವನ್ನು ಏರ್ಪಡಿಸಿರುವವರಿಗೆಲ್ಲಾ ವಂದಿಸಬೇಕು. ಈ ಪ್ರದರ್ಶನವು ಎತಕ್ಕೆ ಏರ್ಪಡಿಸಿರು ವುದು ಎನ್ನುವುದು ತಮಗೆಲ್ಲಾ ಇದನ್ನು ನೋಡುತ್ತಾ ಹೋದಹಾಗೆ ತಿಳಿಯುವು ದು ನೀವು ಬೆಂಗಳೂರಿನಲ್ಲಿ ಪ್ರಥನುತಃ ಸಂಯುಕ್ತ ಜನಾಂಗಗಳು ಮತ್ತು ಇತರ ಭಾರತಪುತ್ರರು ನೌಕೆಗಳಲ್ಲಿಯೂ ಭೂ ಮಿಯ ಮೇಲೂ ವಿಮಾನದಲ್ಲೂ ಉಪ ಯೋಗಿಸುವ ವಿವಿಧ ಆಯುಧಗಳು ಇಲ್ಲಿ ಜಮಾಯಿಸಿರುವುದನ್ನು ನೋಡಬಹುದು, ನೀವು ಇಲ್ಲಿ ಕನಿಕರ ಪಡದೆ ಈ ಯುದ್ಧ ದಲ್ಲಿ ಅಕ್ಸಿಸರನ್ನು ನಾಶಮಾಡಲು ಉಪ ಯೋಗಿಸುವ ಆಂಟಿ ಏರ್‌ಕ್ರಾಫ್ಟ್ ಬಂ ದೂಕ ಮಿಷ್ಟ್ ಒಂದೂಕ ಟ್ಯಾಂಕು ವಾಹನಗಳು ವಿಮಾನಗಳು ಯುದ್ಧನೌಕೆ ಸಬ್ ಮೆರೈನ್ ಮಾಡಲ್ ಇವುಗಳನ್ನು ನೋಡಬಹುದು. ಅಲ್ಲದೆ ಜರ್ಮನ್ ಇಟಾಲಿಯನ್ ಜಪಾನಿಯರಿಂದ ಗೆದ್ದ ಆ ಯುಧಗಳ ಮಾದರಿಯನ್ನು ತೋರಿಸಿರು ವರು. ರೆಡ್‌ಕ್ರಾಸ್ ಸಂಸ್ಥೆಯವರೂ ಸೆಂಟ್‌ಜಾರ್ಜ್ ಆಂಬುಲೆನ್ಸ್ ಅಸೋಸಿ ಯೇಷನ್ನಿನವರೂ ಪ್ರಜಾವರ್ಗಕ್ಕೆ ಮಾಡುವ ಸೇವೆಯನ್ನೂ ನೋಡುವಿರಿ. ಈ ಭಯಂಕರವಾದ ಯುದ್ಧವನ್ನು ಮುಕ್ತಾಯಗೊಳಿಸಲು ನೀವು ಮಾಡಬೇಕಾದ್ದೇನೆಂಬುದನ್ನು ಇಲ್ಲಿ ತಿಳಿದುಕೊಳ್ಳುವಿರಿ. ಈ ಮಹಾ ಯುದ್ಧದಲ್ಲಿ ನಾವು ಹೇಗೆ ಸಹಾಯ ಮಾಡಬಹುದೆಂದು ನೀವು ಕೇಳಬಹುದು. ಯುದ್ಧ ಮಾಡುತ್ತಿರುವವರು ಹೇಗೆ ಶತ್ರುಗಳ ಪ್ರಾಣ ಪಡೆಯುವರು, ಇದಕ್ಕಿಂತ ಹೆಚ್ಚಾಗಿದ್ದೇನಿದೆ! ಇಲ್ಲಿ ನೀವು ನೋಡುವ ಅಗಾಧವಾದ ಆಯುಧಗಳು ಬೇಗನೆ ತಯಾರಾಗಿ ಯುದ್ಧವು ಬೇಗ ಮುಗಿಯಲು ಅನುಕೂ ಲವಾಗುವುದು. ಕಾರ್ಖಾನೆಗಳಲ್ಲಿರುವವರು ಬಟ್ಟೆ ರೇಷ್ಮೆ ಮೊದಲಾದುವನ್ನು ತಯಾರ್ಮಾಡುವವರೂ ಯುದ್ಧಕ್ಕೆ ಸಹಾಯ ಮಾಡಿದಂತೆಯೇ. ಎ ಆರ್ ಪಿ ಸಿವಿಕ್‌ಗಾರ್ಡ್ ರೈತರು ಧನಸಹಾಯ ಮಾಡುವವರೂ ನಿರಾಶ್ರಿತರಿಗೆ ಆಶ್ರಯ ಕೊಟ್ಟವರೂ ಇವರೆಲ್ಲಾ ಈ ಯುದ್ಧಕ್ಕೆ ಒಂದು ಒಗೆಯಲ್ಲಿ ಸಹಾಯ ಮಾಡಿದಂತೆಯೇ. ನಾವು ಹೆಚ್ಚಾಗಿ ಹೇಳಬೇಕಾಗಿಲ್ಲ. ಈ ಪ್ರದರ್ಶನವನ್ನು ನೋಡಿದ ಮಾತ್ರದಿಂದಲೇ ಗೊತ್ತಾಗುವುದು. ಯುದ್ಧದಲ್ಲಿ ಮೈಸೂರು ಪ್ರಜೆಗಳು ಒಂದೇ ಮನಸ್ಸಿನಿಂದ ನಾನಾ ರೀತಿಗಳಲ್ಲಿ ಸಹಾಯ ಮಾಡುವುದನ್ನು ನೋಡಿ ನಮಗೆ ಸಂತೋಷವಾಗುವುದು. ಪ್ರಜೆಗಳು ತಮ್ಮ ಶಕ್ತಿ ನಿಧಾರ ದ್ರವ್ಯ ರೂಪದಲ್ಲಿ ಸಹಾಯ ಮಾಡಿರುತ್ತಾರೆ. ಯುದ್ಧವಾದಾಗಿನಿಂದ ಸಂಸ್ಥಾನದ ಕಾರ್ಖಾನೆಗಳು ರಾತ್ರಿಹಗಲೂ ಕೆಲಸಮಾಡುತ್ತಿವೆ ಈಗ ಈ ಕಾರ್ಖಾನೆಗಳು ಆರಂಭವಾದಂದಿ ನಿಂದ ಕೋಟಿ ರೂಪಾಯಿನ ಪದಾರ್ಥಗಳನ್ನು ತಯಾರಿಸಿರುವರು. ನೀವುಗಳು ಯುದ್ಧೋದ್ಯಮದಲ್ಲಿ ಹೆಚ್ಚು ಆಸಕ್ತತೆ ತೋರಿಸುತ್ತೀರೆಂದು ನನ್ನ ಆಶಯ.

ಇದಲ್ಲದೆ ನಮ್ಮ ದೇಶವನ್ನು ಕಾಯುವುದರಿಂದ ಯುದ್ಧ ಸಮಾಪ್ತಿಯನ್ನು ಬೇಗ ಕಾಣಬಹುದು. ಯುದ್ಧ ಗೆಲ್ಲುವುದು ಹೇಗೆ? ಪದಾರ್ಥಗಳ ಬೆಲೆ ಮಿತಮೀರದಿರುವುದು. ಅನೇಕ ವೇಳೆ ಸಿಗದೇ ಇರುವಾಗಲೂ ಪೆಟ್ರೋಲು ಕಮ್ಮಿಯಾಗಿರೋಣವೂ ಪ್ರಯಾಣಕ್ಕೆ ತೊಂದರೆಯಾಗುವಂತೆಯೂ ಇವನ್ನೆಲ್ಲಾ ಪ್ರಯೊಬ್ಬರೂ ಸಂತೋಷದಿಂದ ಅನುಕೂಲವಾಗುವುದು. ಬಡಾಯಿ ಕೊಚ್ಚುತ್ತಿದ್ದ ನಾಜಿಗಳೂ ಫ್ಯಾಸಿಸ್ಟುಗಳೂ ಹೋದ ತಿಂಗಳಲ್ಲಿ ಪೂರ್ತಿ ಸೋತುಹೋದರು. ಆಫ್ರಿಕಾ ಯುದ್ಧ ಮುಕ್ತಾಯವಾಯಿತು ಸಂಯುಕ್ತ ಜನಾಂಗವು ಹಿಟ್ಲರಿನ ಆಫ್ರಿಕಾ ಸೇನೆಯನ್ನು ನಿರ್ಮೂಲ ಮಾಡಿದರು. ಮುಸೋಲನಿಯ ಆಫ್ರಿಕಾ ಸಾಂರಾಜ್ಯ ಚಾವಟಿಯನ್ನು ಕೆಳಗೆ ಇಳಿಸಿದರು. ಈ ಯುದ್ಧದಲ್ಲಿ ನಮ್ಮ ಭಾರತ ಸೇನೆಗಳು ಅದ್ಭುತ ಶಕ್ತಿ ತೋರಿಸಿದವು ಈ ಜಯವು ಮುಂದೆ ಪಶ್ಚಿಮ ಆಫ್ರಿಕಾದಲ್ಲಿ ನಡೆಯುವ ಯುದ್ಧಕ್ಕೆ ಪೀಠಿಕೆಯು. ಈ ವಿಜಯದಿಂದ ನಮಗೆ ಮುಂದರಿಯಲು ಉತ್ತೇಜನ ಕೊಡುವುದು. ನಾವು ಪ್ರತಿಯೊಬ್ಬರೂ ನಿಜವಾದ ಭಕ್ತರಂತೆ ನಮ್ಮ ಕೆಲಸಗಳನ್ನು ಮಾಡಬೇಕು, ಎಂದು ಶ್ರೀಮನ್ಮಹಾರಾಜರು ಭಾಷಣ ಮಾಡಿ ಈ ವಸ್ತು ಪ್ರದರ್ಶನ ನಿರ್ಮಾಣಕರನ್ನು ಮತಿ ಕೊಂಡಾಡಿದರು.

ವರ್ತಮಾನ ಸಂಗ್ರಹ

ವಿದರಾಸಿನಲ್ಲಿ ಈಸಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜಸ್ಟಿಸ್ ಪಾರ್ಟಿಯ ಉಮೇದುವಾರರು ನಿಂತಿದ್ದರಷ್ಟೆ. ಕಾಂಗ್ರೆಸ್ಸಿನವರಿಗೆ ಜಯವು ಒಂದಕ್ಕೆ ನಾಲ್ಕರಂತೆ ಆಯಿತು. ಇದರಿಂದ ದೇಶವು ಯಾವ ಕಡೆ ಕೂಗುತ್ತಿದೆ ಎಂಬುದು ಗೊತ್ತಾಗುವುದು. ಸರಕಾರದವರು ಬಹಳ ತಿಂಗಳು ವರ್ಷದಿಂದ ತಪ್ಪಿಸಿರುವ ಸೆಂಟ್ರಲ್ ಅಸೆಂಬ್ಲಿಯ ಚುನಾವಣೆಯನ್ನು ನಡೆಸಕೂಡದೆಂದು ಎಲ್ಲರೂ ಕೇಳುತ್ತಾರೆ.

೦ ೦

ಅಮೇರಿಕಾದಲ್ಲಿ ಈ ವರ್ಷ ಸಾವಿರಾರು ವಿಮಾನಗಳನ್ನು ಕಟ್ಟುತ್ತೇವೆಂದು ಕರ್ನಲ್ ನಾಕ್ಸರ್ರು ಹೇಳುತ್ತಾರೆ.

೦ ೦

ಗುಂಟೂರಿನಲ್ಲಿ ಸ್ತ್ರೀಯರಿಗಾಗಿ ಒಂದು ಕಾಲೇಜನ್ನು ಏರ್ಪಡಿಸಲು ಸಂಸ್ಥಾರದನರು 50 ಸಾವಿರ ರೂಪಾಯಿನ್ನು ಮಂಜೂರ್ಮಾಡಿದ್ದಾರೆ.

ಹೊಸಹೊಸ ಸುದ್ದಿ

ಟೋಕಿಯೋ ಮೇಲೆ ಬಾಂಬು ಹಾಕಬೇಕೆಂದು ಹವಾಯಿ ದ್ವೀಪದಲ್ಲಿರುವ ೭ ಸಾವಿರ ಜಪಾನೀ ಪ್ರಜೆಗಳು ಅಮೇರಿಕಾ ಸರಕಾರಕ್ಕೆ 1೦ ಸಾವಿರ ಡಾಲರ್ ಕೊಟ್ಟಿರುತ್ತಾರೆ.

ಈಗ ತಾವು ಸಹಾಯ ಮಾಡುವುದಾದರೆ ಹಿಟ್ಲರ್ ಮುಸೋಲಿನಿಗೆ ಛರವಸೆ ಕೊಟ್ಟಂತೆ!

ಅಮೇರಿಕಾದ ಸೇನಾನಾಯಕನೇ ಯೂರೋಪು ಮುತ್ತಿಗೆಗೆ ಮುಖ್ಯಾಧಿಕಾರಿಯಾಗಿರುವನೆಂದು ಗೊತ್ತಾಗಿದೆ.

ಮಿ॥ ಚರ್ಚಿಲರು ಪ್ರಯಾಣ ಮಾಡಿದ ಹಡಗಿನಲ್ಲಿ ಸುಮಾರು 400 ಜರ್ಮನ್ ಯುದ್ಧ ಕೈದಿಗಳು ಅಮೇರಿಕಾಕ್ಕೆ ಪ್ರಯಾಣ ಮಾಡಿದರೆಂದು ಈಗ ಗೊತ್ತಾಗಿದೆ.

ಒಲ್ಲೇರಿಯಾದಲ್ಲಿದ್ದ ಯಹೂದ್ಯರ ಆಸ್ತಿಯನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಂಡರು.

ಶತ್ರುಗಳು ವಿಷವಾಯುವನ್ನು ಉಪಯೋಗಿಸಲು ಸಿದ್ಧರಾಗುತ್ತಿದ್ದಾರೆಂದೂ ಹಾಗೆ ಮಾಡಿದಲ್ಲಿ ತಾವು ಅವರಿಗಿಂತ ಹೆಚ್ಚಾಗಿ ಉಪಯೋಗಿಸುವುದೆಂದೂ ಮಿ॥ ರೂಸ್ವೆಲ್ಟರು ಹೇಳಿರುತ್ತಾರೆ.

ಬೊಂಬಾಯಿನಲ್ಲಿ ಯಾರೂ 25 ಮಣಕ್ಕಿಂತ ಹೆಚ್ಚಾಗಿ ಸಕ್ಕರೆಯನ್ನು ದುಸ್ತಾನು ಮಾಡಿದ್ದರೂ ಅದನ್ನೆಲ್ಲಾ ಸರ್ಕಾರದ ವಶಕ್ಕೆ ತೆಗೆದುಕೊಂಡಿರುತ್ತಾರೆ.

ಚೈನಾದಲ್ಲಿನ ಅಮೆರಿಕ ವಿಮಾನಗಳು ಇಂಡೋಚೈನಾದಲ್ಲಿ ಧಾಳಿ ನಡೆಸಿರೇನಿನಲ್ಲಿದ್ದ ಅನೇಕ ಸಣ್ಣಸಣ್ಣ ನೌಕೆಗಳನ್ನು ನಾಶಮಾಡಿವೆ

ಲಕ್ನೋ ಜಿಲ್ಲೆ ಪಿಂಡರಾಸ್ಥಿನಲ್ಲಿ ಒಂದು ಕಳ್ಳರ ಗುಂಪನ್ನು ಪತ್ತೇಮಾಡಲು ಹೋದ ಒಬ್ಬ ಸಬ್ ಇನ್‌ಸ್ಪೆಕ್ಟರನ್ನು ಕಳ್ಳರು ಕೊಂದುಹಾಕಿದರು.

ಸಾಮಾನ್ಯ [illegible] ಸಂಕೋಚದಿಂದ ಪ್ರಜಾಪ್ರತಿನಿಧಿ ಸಭೆಯ ಸಂಬಂಧದ ನಿರ್ಣಯವು ಪ್ರಕಟಿಸಲ್ಪಡಲಿಲ್ಲ.

ವಾರ್ತಾತರಂಗ

ಸ್ಪಿಡ್ಜರ್ಬರ್ಗಿಂಡಿಗೂ ಬರ್ಲಿನ್‌ಗೂ ಮಧ್ಯೆ ಇರುವ ಪ್ರಮುಖವಾದ ಸೆಂಟ್ರಲ್ ಗೋವರ್ ಕಣಿವೆಯು ಸಿಡಿತದಿಂದ ಹಾಳಾಗಿಬಿಟ್ಟಿದೆಯೆಂದು ವರ್ತಮಾನ ಬಂದಿದೆ.

ಈಗ ಭಾರತದಲ್ಲಿ 40 ಸಾವಿರ ನಿರಾಶ್ರಿತರಿರುವರು ಮತ್ತೆ 11 ಸಾವಿರ ಮಂದಿ ಬರುವವರಾಗಿರುವರು.

ರಷ್ಯಾ ರಣರಂಗದಲ್ಲಿ ಜರ್ಮನಿಯು ವರಿಗೆ 3 ತಿಂಗಳಲ್ಲಿ 5 00 ವಿಮಾನ ನಷ್ಟವಾಗಿರುವುದಂತೆ.

ರಷ್ಯಾದ ಎರಡನೇ ಸಾಲವು 24 ಗಂಟೆಯೊಳಗಾಗಿ ತಾವು ಕೇಳಿದ್ದಕ್ಕಿಂತ ಶೇಕಡ 30 ಕ್ಕಿಂತ ಹೆಚ್ಚಾಗಿ ವಸೂಲಾಗಿದೆ.

ಮದರಾಸು ಪಟ್ಟಣದಲ್ಲಿ ಸರ್ಕಾರದವರು ಅಕ್ಕಿಗೆ ಏನೂ ಕೊರತೆಯಿಲ್ಲ ಎನ್ನುತ್ತಾರೆ. ಇದರೆ ಯಾನ ಅಂಗಡಿಯಲ್ಲಿ ನೋಡಿದರೂ ಅಕ್ಕಿ ಇಲ್ಲವೆ ಜನರು ಮನೆಗೆ ಹೋಗುತ್ತಿದ್ದಾರೆ !

ಮ್ಯಾಡಂ ಚಿಯಾಂಗ್ ಕೈಷೇಕ್‌ರು ಜೂ 15 ಕ್ಕೆ ಕೆನಡಾಕ್ಕೆ ಬಂದು, 3 ದಿವಸ ತಂಗುವರು, ಆಗ ಅಲ್ಲಿನ ಪಾರ್ಲಿಮೆಂಟಿನಲ್ಲಿ ಮಾತಾಡುವರು.

ಭಯಂಗ್ರಾಂತರಾಗಿ ಜರ್ಮನಿಯ ಭಾರಿ ವಿಮಾನ ಪಡೆಗಳು ಇತರ ರಣರಂಗದಿಂದ ಮೆಡಿಟರೇನಿಯನ್ ಕಡೆ ಜಮಾವಣೆಯಾಗುತ್ತಿರುವವು.

1941 ರಿಂದ ಪ್ರಸಿದ್ಧ ಮಿಲಿಟರಿ ವ್ಯಾಖ್ಯಾನಕಾರನಾದ ಲೆಫ್ಟ್ಯಾಂಟ್ ಜನರಲ್ ಡಿಟ್‌ಮಾರನು ಪ್ರತಿವಾರವೂ ಜರ್ಮನಿಯ ವಾರ್ತೆಯನ್ನು ಜರ್ಮನ್ ಆಕಾಶವಾಣಿಯಲ್ಲಿ ಹೇಳುತ್ತಿದ್ದನು. ಈಗ ಆತನ ಭಾಷಣ ನಿಂತಿದೆ. ಕಾರಣ ?

ಮಿಡ್ನಾಪುರದಲ್ಲಾದ ಹಾನಿಗೆ ಬಂಗಾಳ ಸರಕಾರವು ಮತ್ತೆ ಒಂದು ಕೋಟಿ ರೂಪಾಯಿ ಕೊಟ್ಟಿದೆ.

ಮಾಂಡಲೆಯ ಸುತ್ತಮುತ್ತ ಬ್ರಿಟಿಷ್ ವಿಮಾನಗಳು ಧಾಳಿ ಮಾಡಿ ಜಪಾನೀಯರಿಗೆ ವಿಶೇಷ ನಷ್ಟಮಾಡಿದವು.

ಮಿರೇಜ್ ಸ್ಟೇಷನ್ನಿಗೂ ಕರಾಚಿ ಸ್ಟೇಷನ್ನಿಗೂ ಮಧ್ಯೆ ಬಿ. ಎಸ್. ಎಂ ರೈಲ್ವೆ ಸ್ಪೆಷಲ್ ರೈಲು ನೌಕರರಿಗೆ ಸಂಬಳ ಬಟವಾಡೆ ಮಾಡಲು 15 ಸಾವಿರ ರೂಪಾಯಿ ತುಂಬಿಕೊಂಡು ಹೋಗುತ್ತಿತ್ತು. ಕಳ್ಳರು ಮುತ್ತಿ ಹಣವನ್ನು ಲೂಟಿ ಮಾಡಿಕೊಂಡು ಹೋದರು.

1941 ರಲ್ಲಿ ಸಿಂಗಪೂರಿನ ಬಳಿ ಬ್ರಿಟಿಷ್ ಭಾರಿ ನೌಕೆಯಾದ ರಿಪಲ್ಸನ್ನು ಮುಳುಗಿಸಿದ್ದರಷ್ಟೆ. ಇದನ್ನು ನೀರಿನಿಂದ ಮೇಲಕ್ಕೆ ಎತ್ತಲು ಏರ್ಪಾಡಾಗಿದೆ.

ಅಮೇರಿಕಾದಲ್ಲಾದ 1 ವಾರದ ಕಲ್ಲಿಜ್ಜಲು ಮುಷ್ಕರದಿಂದ 11 ಮಿಲಿಯನ್ ಟನ್ ಕಲ್ಲಿಜ್ಜಲು ಗಣಿಯಿಂದ ಹೊರಬೀಳುವುದಾಗಲಿಲ್ಲ

ಭಾರತದ ವೈಸರಾಯಿ ಪದವಿಯಾಗಲಿ ಯಾವ ಪ್ರಕಟಿಸಿಲ್ಲ. ಮಿ || ಅಬ್ಬೋಟ್ ಈಡರ್‌ರವರಿಗೆ ಆಗಬಹುದೆಂದು ಲಂಡನ್ ಪತ್ರಿಕೆಗಳು ಹೇಳುತ್ತವೆ

ಕಳೆದ ಏಪ್ರಿಲ್‌ನಿಂದ ಜಪಾನೀಯರ ವಿಮಾನಗಳು ಬಿದ್ದು ಭಾರತದಲ್ಲಿ 816 ಮಂದಿ ಸತ್ತರು, 878 ಮಂದಿ ಗಾಯಗೊಂಡರು. ಬಂಗಾಳ, ಅಸ್ಸಾಂ ಮದ್ರಾಸು, ತ್ರಿಪುರ ಮಣಿಪುರಗಳಲ್ಲಿ ಮಾತ್ರ ವಿಮಾನ ಧಾಳಿಯಾಯಿತು.

ಫೆಡರಲ್ ಕೋರ್ಟು ಹೊಸ ಜೀಫ್ ಜಸ್ಟಿಸರು ತಮ್ಮ ಕೆಲಸದ ಮೇಲೆ ಹಾಜರಾದರು.

ಮಿತ್ರಪಕ್ಷದವರು ಕ್ರೀಟ್ ದ್ವೀಪವನ್ನು ವಶಮಾಡಿಕೊಳ್ಳುವರೆಂದು ರೋಂ ಆಕಾಶವಾಣಿಯಿಂದ ತಿಳಿಯಬರುತ್ತದೆ

ಟ್ಯುನಿಸಿಯಾ ತೀರದಲ್ಲಿ ಮಿತ್ರಪಕ್ಷದವರು ಹೇರಳವಾಗಿ ನೌಕೆಯನ್ನೂ ವಿಮಾನವನ್ನೂ ಒಟ್ಟುಗೂಡಿಸುತ್ತಿರುತ್ತಾರಂತೆ.

ಜನರಲ್ ಡಿಗಾಲ್ ಮತ್ತು ಜನರಲ್ ಜಿರೋ ಇವರು ಮುಂದೆ ಯಾವ ರೀತಿ ಫ್ರಾನ್ಸ್ ಯುದ್ಧ ನಡೆಯಬೇಕೆನ್ನುವದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಿರುವರು.

ನಾವು ರಷ್ಯಾದ ಸಂಗಡ ಸಖ್ಯ ಬೆಳೆಸಿದ್ದು ನನಗೆ ಅಧಿಕ ಸಮಾಧಾನದಲ್ಲಿ ಸಹಾಯವಾಯಿತೆಂದು ಮಿ || ಚರ್ಚಿಲ್ ವಿಂಟರ್‌ಟನ್ನರು ಮಾಸ್ಕೋದಿಂದ ಆಕಾಶವಾಣಿಯಲ್ಲಿ ಮಾತನಾಡಿದರು.

ರಷ್ಯಾದ ಸರಕಾರ ಪದ್ಧತಿ ಮತ್ತು ಕಮ್ಯೂನಿಜಂ ಪದ್ಧತಿಯನ್ನು ಬ್ರಿಟಿಷ್ ಕೂಲಿಗಾರರು ಅನುಸರಿಸುವುದು ಸರಿಯಾದದ್ದಲ್ಲವೆಂದು ಬ್ರಿಟಿಷ್ ಸ್ಥಳೀಯ ಮಂತ್ರಿಯವರು ಹೇಳಿರುತ್ತಾರೆ.

ಒರ್ವಾ ಯುದ್ಧವು ಕೊನೆಗೊಂಡಿತು. ಮಳೆ ಪ್ರಾರಂಭವಾಯಿತು, ಜಪಾನೀಯರು ಬಾರತದ ಮೇಲೆ ಧಾಳಿ ಮಾಡುವುದು ನಿಂತಿತು. ಇನ್ನು ಭಾರತೀಯರು ಮುಂದಿನ ಯುದ್ಧಕ್ಕೆ ಸೇನೆ ತಯಾರು ಮಾಡಿಕೊಳ್ಳುವುದಕ್ಕೂ ಮದ್ದುಗುಂಡು ಸಿದ್ಧಮಾಡಿಕೊಳ್ಳುವುದಕ್ಕೂ ಅವಕಾಶ ಸಿಕ್ಕಿತು, ಎಂದು ಪತ್ರಿಕೆಯು ತಿಳಿಸುತ್ತದೆ.

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

Ranjit — — Satyabhama

ರಣಜಿತ್ ಟಾಕೀಸ್

ವೈ. ವಿ. ರಾವ್ ಮತ್ತು ಪುಷ್ಪವಲ್ಲಿ

ಪಾತ್ರವಹಿಸಿರುವ

[ತೆಲಗು] ಸತ್ಯಭಾಮಾ [ತೆಲಗು]

ಶಕ್ತಿ ಸಾಧನೆಗೆ ಸುಲಭೋಪಾಯವು

ರಸಾಯನ ರಾಜ

ಸುಧಾ

ಸೇವನೆ ಎಂಬುದು ನಿಮ್ಮ ಜ್ಞಾಪದಲ್ಲಿರಲಿ.
ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ
ಬೆಲೆ 1 ರೂಪಾಯಿ

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ OR [Violinist]

ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗನೇ ಬರಲಿದೆ

Edited, Printed & published by M. S. Krishna Rao, at the Satyavadi Press. Chamaraja Agrahar, Mysore.